# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1284
ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 19-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮೋಹಳ್ಳಿಯಿಂದ 227/1 ನಂಬರ್ ಬಸ್ಸು ಬೆಳಗ್ಗೆ 08.30 ಗಂಟೆಗೆ ಕೆಂಗೇರಿ ಮಾರ್ಗವಾಗಿ ಟೌನ್‌ಹಾಲ್ ಮೂಲಕ ಮೈಸೂರು ಬ್ಯಾಂಕ್ ಮಾರ್ಗವಾಗಿ ಹೈಕೋರ್ಟ್/ ವಿಧಾನಸೌಧಕ್ಕೆ ಆಗಮಿಸುತ್ತಿದ್ದು, ಸುಮಾರು 4 ತಿಂಗಳುಗಳಿಂದ ರಾಮೋಹಳ್ಳಿಯ ಬದಲಾಗಿ ಚಂದ್ರಪ್ಪ ಸರ್ಕಲ್‌ನಿಂದ ಬಸ್‌ನ್ನು ಚಾಲನೆಗೊಳಿಸಲಾಗಿದೆ; ಇದರಿಂದ ಹೈಕೋರ್ಟ್/ ವಿಧಾನಸೌಧಕ್ಕೆ ಬರತಕ್ಕಂಥ ಅಧಿಕಾರಿ/ ನೌಕರರುಗಳಿಗೆ ವೇಳೆಯ ಬದಲಾವಣೆ ಹಾಗೂ ಸ್ಥಳದ ಅಭಾವದಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ರಾಮೋಹಳ್ಳಿಯಿಂದ ಬೆಳಗ್ಗೆ 08:30 ಗಂಟೆಗೆ ಕೆಂಗೇರಿ, ಟೌನ್‌ಹಾಲ್, ಹೈಕೋರ್ಟ್/ ವಿಧಾನಸೌಧ ಮಾರ್ಗವಾಗಿ ಶಿವಾಜಿನಗರಕ್ಕೆ ಆಚರಣೆಯಲ್ಲಿದ್ದ ಮಾರ್ಗ ಸಂಖ್ಯೆ: 227ರ ಬಸ್ಸನ್ನು ಸಾರ್ವಜನಿಕ ಪ್ರಯಾಣಿಕರ ಕೋರಿಕೆಯ ಮೇರೆಗೆ ದಿನಾಂಕ:25-10-2024 ರಿಂದ ಜಾರಿಗೆ ಬರುವಂತೆ ಚಂದ್ರಪ್ಪ ಸರ್ಕಲ್‌ಗೆ ವಿಸ್ತರಿಸಿ, 08:20 ಗಂಟೆಗೆ ಚಂದ್ರಪ್ಪ ಸರ್ಕಲ್‌ನಿಂದ ರಾಮೋಹಳ್ಳಿ, ಕೆಂಗೇರಿ, ಟೌನ್‌ಹಾಲ್, ಹೈಕೋರ್ಟ್/ ವಿಧಾನಸೌಧ ಮಾರ್ಗವಾಗಿ ಶಿವಾಜಿನಗರಕ್ಕೆ ಆಚರಣೆಗೊಳಿಸಲಾಗುತ್ತಿತ್ತು.<br><br>ಆದರೆ ಹಾಲಿ ಸೌಲಭ್ಯ ಪಡೆಯುತ್ತಿದ್ದ ಪ್ರಯಾಣಿಕರಿಂದ ತೀವ್ರ ವಿರೋಧ/ ದೂರುಗಳನ್ನು ಸ್ವೀಕರಿಸಿದ ನಂತರ, **ದಿನಾಂಕ: 08-03-2025 ರಿಂದ ಜಾರಿಗೆ ಬರುವಂತೆ ಮತ್ತೆ ಮೊದಲಿನಂತೆ ಬೆಳಗ್ಗೆ 08:30 ಗಂಟೆಗೆ ರಾಮೋಹಳ್ಳಿಯಿಂದ ಕೆಂಗೇರಿ, ಟೌನ್‌ಹಾಲ್, ಹೈಕೋರ್ಟ್/ ವಿಧಾನಸೌಧ ಮಾರ್ಗವಾಗಿ ಶಿವಾಜಿನಗರಕ್ಕೆ ಹಾಗೂ ಸಂಜೆ 05:15 ಗಂಟೆಗೆ ಶಿವಾಜಿನಗರದಿಂದ ಹೈಕೋರ್ಟ್/ ವಿಧಾನಸೌಧ, ಕೆಂಗೇರಿ ಮಾರ್ಗವಾಗಿ ರಾಮೋಹಳ್ಳಿಗೆ ಆಚರಣೆ ಗೊಳಿಸಲಾಗುತ್ತಿದೆ.**<br><br>ಸದರಿ ಬಸ್ಸನ್ನು ವ್ಯವಸ್ಥಿತವಾಗಿ ಆಚರಣೆಗೊಳಿಸಲು ಕ್ರಮವಹಿಸಲಾಗಿದ್ದು, ಇದು ಅಲ್ಲಿನ ಪ್ರಯಾಣಿಕರ ಅವಶ್ಯಕತೆಗನುಗುಣ ವಾಗಿರುತ್ತದೆ. |
| ಆ. | ಸುಮಾರು ಎರಡು ತಿಂಗಳಿನಿಂದ ಈ ಬಸ್ಸಿಗೆ ಡ್ರೈವರ್ ಹಾಗೂ ಕಂಡಕ್ಟರ್ ಇಲ್ಲವೆಂದು ಸಾರಿಗೆ ಇಲಾಖೆಯವರು ಸಬೂಬು ಹೇಳುತ್ತಿರುವುದರಿಂದ ಈ ಮಾರ್ಗದಲ್ಲಿ ಪ್ರಯಾಣಿಸುವ ವಿಧಾನಸೌಧ, ವಿಕಾಸಸೌಧ, ಎಂ.ಎಸ್ ಬಿಲ್ಡಿಂಗ್, ಹೈಕೋರ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರುಗಳಿಗೆ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ. | ಬಂದಿದ್ದಲ್ಲಿ, ಈ ಬಸ್ಸನ್ನು ಪುನರ್ ಪ್ರಾರಂಭಿಸಿ ಬೆಳಗ್ಗೆ 08:30ಕ್ಕೆ ರಾಮೋಹಳ್ಳಿಯಿಂದ ಮತ್ತು ಸಂಜೆ 05.30 ಗಂಟೆಗೆ ವಿಧಾನಸೌಧದ ಮುಂಭಾಗದಿಂದ ಟೌನ್‌ಹಾಲ್, ಕೆಂಗೇರಿ ಮಾರ್ಗವಾಗಿ ರಾಮೋಹಳ್ಳಿಗೆ ಸಂಚರಿಸುವ ಬಗ್ಗೆ ಕ್ರಮ ಜರುಗಿಸಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಟಿಡಿ 86 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು